<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,</u>
<u>ಹೊಸದುರ್ಗ</u>

ಓಎಸ್ **22/2022**
ಪಿ.ಡಬ್ಲೂ. **1**

ದಿನಾಂಕ..**27/11/2023**..ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲು <u>: ಶ್ರೀ.ಹೆಚ್ ಆರ್ ಎಸ್ ವಕೀಲರಿಂದ ಪ್ರತಿವಾದಿಯ ಪರವಾಗಿ</u>

3. 50-60 ವರ್ಷದ ಹಿಂದೆ ನನ್ನ ಮದುವೆಯಾಗಿರುತ್ತದೆ. ಕಬ್ಬಳಕ್ಕೆ ನನ್ನನ್ನು ಕೊಟ್ಟು ಮದುವೆ ಮಾಡಿರುತ್ತಾರೆ. ಮಾರಜ್ಜನ ಮಗ ಬೈರಣ್ಣನಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ಮತ್ತುರಿನಲ್ಲಿ ಯಾಕ ವಾಸ ವಾಗಿರುತ್ತೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ನಮ್ಮ ತಂದೆಗೆ ಗಂಡು ಮಕ್ಕಳಿರಲ್ಲಿ ಅವರನ್ನು ಮತ್ತು ಜಮೀನನ್ನು ನೋಡಿಕೊಂಡು ಇದ್ದೇವು ಎಂದು ನುಡಿಯುತ್ತಾರೆ. ಮತ್ತೂರು ನಿನ್ನ ಗಂಡನ ಮನೆ ಎಂದು ಸೂಚಿಸಲಾಗಿ ಸಾಕ್ಷಿ ತವರು ಮನೆ ಎಂದು ನುಡಿಯುತ್ತಾರೆ. ಕಬ್ಬಳ ನನ್ನ ತವರು ಮನೆ ಎನ್ನುವುದು ಸರಿಯಲ್ಲ.

4. ನನ್ನ ತಂದೆಯು ಹೆಸರು ರಂಗಪ್ಪ, ನನ್ನ ತಂದೆಗೆ ನಾಲ್ಕು ಜನ ಮಕ್ಕಳು. 1 ನೇ ಲಕ್ಕಮ್ಮ, ಎರಡನೇ ನಾನು, ಮೂರನೇ ಲಕ್ಷ್ಮಮ್ಮ, ನಾಲ್ಕನೇ ಚಂದ್ರಮ್ಮ ಆಗಿರುತ್ತಾರೆ. ನನ್ನನ್ನು ಮತ್ತು 1 ನೇ ಪ್ರತಿವಾದಿಯನ್ನು ಕಬ್ಬಳಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ. ಎರಡನೇ ವಾದಿಯನ್ನು ಕೊತ್ತಿಗೆರೆಗೆ ಕೊಟ್ಟು ಮದುವೆ ಮಾಡಿರುತ್ತಾರೆ. ಮೂರನೇ ವಾದಿಯನ್ನು ಆಲಘಟ್ಟಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ.

5. ಪ್ರತಿವಾದಿ ಕಬ್ಬಳದಲ್ಲಿಯೇ ವಾಸವಾಗಿರುತ್ತಾರೆ. ಸಾಕ್ಷಿ ಮುದುವೆರೆದು ನನ್ನನ್ನು ಪ್ರತಿವಾದಿಯನ್ನು ಕಬ್ಬಳಕ್ಕೆ ಕೊಟ್ಟು ಮದುವೆ ಮಾಡಿಕೊಟ್ಟಿದ್ದು ನಮ್ಮ ತಂದೆಯು ಊರಿನಲ್ಲಿಯೂ ಅವರನ್ನು ನೋಡಿಕೊಂಡು ಅಲ್ಲಿಯೂ ಇಲ್ಲಿಯೂ ಎರಡೂ ಕಡೆ ನೋಡಿಕೊಂಡು ಸಂಸಾರ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ನಮ್ಮ ತಂದೆಯ ತಂದೆಯ ಹೆಸರು ಕರಿಲಕ್ಕಪ್ಪ ಆಗಿರುತ್ತದೆ. ನಮ್ಮ ಅಜ್ಜ ಕರಿಲಕ್ಕಪ್ಪ ರವರಿಗೆ ಮೂರು ಜನ ಮಕ್ಕಳು . 1 ನೇ ನನ್ನ ತಂದೆ ರಂಗಪ್ಪ, ಎರಡನೇ ಮುತ್ತಪ್ಪ, ಮೂರನೆಯವರು ಲಕ್ಕಪ್ಪ ಆಗಿರುತ್ತಾರೆ. ನನ್ನ ತಂದೆ ರಂಗಪ್ಪ ಮತ್ತು ಅವರ ಸಹೋದರರ ನಡುವೆ ವಿಭಾಗ ಆಗಿತ್ತು . ನನ್ನ ಮದುವೆಯಾದ ನಂತರ ನನ್ನ ತಂದೆ ವಿಭಾಗ ಮಾಡಿಕೊಂಡಿದ್ದರೂ. ಈ ರೀತಿ ನನ್ನ ತಂದೆ ಮತ್ತು ಸಹೋದರರು ವಿಭಾಗ ಮಾಡಿಕೊಂಡಾಗ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ಪಾಲು ವಿಬಾಗ ಪತ್ರದದಲ್ಲಿ ದಾವಾ ಸ್ವತ್ತುಗಳು ನನ್ನ ತಂದೆಯ ಭಾಗಕ್ಕೆ ಬಂದಿದ್ದ

ಸ್ವತ್ತುಗಳಾಗಿರುತ್ತವೆ ಎಂದರೆ ಸರಿ.

6. ನಮ್ಮ ತಂದೆ ಮರಣ ಹೊಂದಿ 25 ವರ್ಷಗಳಾಗಿರುತ್ತದೆ ನಿಖರವಾದ ತಿಂಗಳು ವರ್ಷ ಹೇಳಲು ಆಗುವುದಿಲ್ಲ. ನಿಮ್ಮ ಚಿಕ್ಕಪ್ಪ ಮುದ್ದಪ್ಪನ ಮಕ್ಕಳು ಗೋವಿಂದಪ್ಪ, ಗೋಪಾಲಪ್ಪ, ಸುಬ್ಬಣ್ಣ ಇವರು ಪ್ರತಿವಾದಿ ಸ್ವಾಧೀನದಲ್ಲಿದ್ದ ಜಮೀನುಗಳಿಗೆ ತಂಟೆ ತಕರಾರು ಮಾಡಿದ್ದರೂ ಎಂದು ಸೂಚಿಸಲಾಗಿ ಸಾಕ್ಷಿ ನಮ್ಮ ತಂದೆಯ ಜಮೀನುಗಳಿಗೆ ಮಾಡಿದ್ದರೂ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ.,ಹೊಸದುರ್ಗ.